**Karnataka State Diploma In Nursing Examination Board**
First Floor, Library Block, BMC&RI Campus, K.R.Road, Bengaluru-560002
**Ph No**: 080-26700074, 26700075 **Email**: ksdneb@gmail.com Website: WWW.ksdneb.org

ಸಂಖ್ಯೆ:ಕ.ರಾ.ಶು.ಪ.ಮಂ./ಸಿಬ್ಬಂದಿ/ 07 /2026-27 ದಿನಾಂಕ: 28.04.2026

## ಅಧಿಸೂಚನೆ

1. ಸರ್ಕಾರದ ಆದೇಶ ಸಂಖ್ಯೆ ಆಕುಕ 84 ಎಂಎಂಸಿ 2019, ಬೆಂಗಳೂರು, ದಿನಾಂಕ 31–08–2019 ರಲ್ಲಿ ತಿಳಿಸಿರುವಂತೆ, 2026–27 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೋಮಾ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸಿನ ಆಯ್ಕೆಗಾಗಿ ಸರ್ಕಾರಿ ಶುಶ್ರೂಷ ಶಾಲೆ ಹಾಗೂ ಖಾಸಗಿ ಶುಶ್ರೂಷ ಶಾಲೆಗಳಲ್ಲಿನ ಸರ್ಕಾರಿ ಕೋಟಾದ ಶೇಕಡಾ 10 ರಷ್ಟು ಸೀಟುಗಳಿಗೆ ದ್ವಿತೀಯ ಪಿ.ಯು.ಸಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

   ಅರ್ಜಿಯನ್ನು ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ದಿನಾಂಕ: 30-04-2026 ರಿಂದ 20-05-2026 ರವರೆಗೆ ಆನ್‌ಲೈನ್ ಮುಖಾಂತರ ಸಲ್ಲಿಸಬಹುದು.

2. **ವೆಬ್‌ಸೈಟ್ ವಿಳಾಸ www.ksdneb.org .**

   ಅರ್ಜಿ ಶುಲ್ಕ ರೂ. 400/- (ಪಜಾ/ಪಪಂ, ವರ್ಗ-1 ಕ್ಕೆ ರೂ. 250/-) ಗಳನ್ನು ನಿಗದಿಗೊಳಿಸಿದ್ದು, ಅರ್ಜಿ ಶುಲ್ಕವನ್ನು ಆನ್‌ಲೈನ್ ಇ–ಪೇಮೆಂಟ್ ಮುಖಾಂತರ ಪಾವತಿಸುವುದು.

3. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ವೆಬ್‌ಸೈಟ್ ಅನ್ನು ಹೆಚ್ಚಿನ ಮಾಹಿತಿಗಾಗಿ ಗಮನಿಸುತ್ತಿರಬೇಕು. ಡಿಪ್ಲೊಮ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸ್‌ಗೆ ಆಯ್ಕೆ ಮಾಡುವ ಸಲುವಾಗಿ **www.ksdneb.org** ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗುವುದು. ದ್ವಿತೀಯ ಪಿ.ಯು.ಸಿ.ಯ ಮೂಲ ಅಂಕಪಟ್ಟಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಇತ್ತೀಚಿನ ದೇಹಧಾರ್ಢ್ಯತೆ ಪ್ರಮಾಣ ಪತ್ರ (ಅಂಗವಿಕಲ ಕೋಟಾ ಅಭ್ಯರ್ಥಿಗಳಿಗೆ ಮಾತ್ರ), ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ತಹಸೀಲ್ದಾರರಿಂದ ಪಡೆದಿರಬೇಕು) ಹಾಗೂ 1ನೇ ತರಗತಿಯಿಂದ 12ನೇ (ದ್ವಿತೀಯ ಪಿ.ಯು.ಸಿ) ತರಗತಿಯವರೆಗೆ ಕನಿಷ್ಠ 7 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ದೃಡೀಕೃತಗೊಳಿಸಿ ಅಪ್‌ಲೋಡ್ ಮಾಡಬೇಕು.

4. **<u>ವಿದ್ಯಾರ್ಹತೆ:</u>** ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 44 ಎಂಪಿಎಸ್ 2003(3), ದಿನಾಂಕ: 03–07–2003 ಹಾಗೂ ಭಾರತೀಯ ಶುಶ್ರೂಷ ಪರಿಷತ್ತಿಗೆ ಪರಿಷ್ಕೃತ ಪ್ರವೇಶ ಅರ್ಹತೆಯ ಪ್ರಕಾರ ಈ ಕೆಳಕಂಡ ವಿದ್ಯಾರ್ಹತೆ ಹೊಂದಿರಬೇಕು.

a) 10+2 with 40% marks from any recognized board. However science is Preferable.

b) 5% is relaxed for SC/ ST candidates.

c) ಭಾರತೀಯ ಶುಶ್ರೂಷ ಪರಿಷತ್ತಿನ ಪತ್ರ ಸಂಖ್ಯೆ:18–15/ಎಸ್ಎನ್ಆರ್1/2013–ಐ.ಎನ್.ಸಿ ದಿನಾಂಕ: 10–09–2015ರ ಪ್ರಕಾರ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿಯಲ್ಲಿ ಕಡ್ಡಾಯವಾಗಿ **ಇಂಗ್ಲೀಷ್ ವಿಷಯವನ್ನು** ವ್ಯಾಸಂಗ ಮಾಡಿರಬೇಕು.

d) ಭಾರತೀಯ ಶುಶ್ರೂಷಾ ಪರಿಷತ್ತಿನ ಪ್ರವೇಶಾತಿಯ ಮಾರ್ಗಸೂಚಿಯನ್ವಯ ಪ್ರಸಕ್ತ ವರ್ಷದ ಡಿಸೆಂಬರ್ 31, 2026 ಕ್ಕೆ ಅಭ್ಯರ್ಥಿಯ ವಯಸ್ಸು 17 ವರ್ಷ ತುಂಬಿರಬೇಕು.

e) ಅಭ್ಯರ್ಥಿಗಳು 1ನೇ ತರಗತಿಯಿಂದ 12ನೇ (ದ್ವಿತೀಯ ಪಿ.ಯು.ಸಿ) ತರಗತಿಯವರೆಗೆ ಕನಿಷ್ಠ 7 ವರ್ಷಗಳು ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರಬೇಕು.

**ಅಥವಾ**

f) ಅಭ್ಯರ್ಥಿಗಳು ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ಅಥವಾ ಅದಕ್ಕೆ ತತ್ಸಮಾನವಾದ ವ್ಯಾಸಂಗವನ್ನು ಮಾಡಿರಬೇಕು ಹಾಗೂ ಅಭ್ಯರ್ಥಿಯ ಪೋಷಕರಲ್ಲಿ ಒಬ್ಬರು ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 7 ವರ್ಷಗಳು ವ್ಯಾಸಂಗ ಮಾಡಿರಬೇಕು (ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರ ನೀಡತಕ್ಕದ್ದು)

g) ಹೊರನಾಡ ಕನ್ನಡಿಗರು / ಗಡಿನಾಡ ಕನ್ನಡಿಗರು ಅರ್ಜಿ ಸಲ್ಲಿಸಬಹುದಾಗಿದೆ. ತಾವು ಹೊರನಾಡ ಕನ್ನಡಿಗರು / ಗಡಿನಾಡ ಕನ್ನಡಿಗರು ಎಂಬುದನ್ನು ದೃಢೀಕರಿಸಲು ಸಂಬಂಧಪಟ್ಟ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದು ಸಂದರ್ಶನ ಅಥವಾ ಕೌನ್ಸಿಲಿಂಗ್ ಸಮಯದಲ್ಲಿ ಸಲ್ಲಿಸುವುದು. ಅಭ್ಯರ್ಥಿಗಳಿಗೆ ಕನ್ನಡ ಓದಲು ಮತ್ತು ಬರೆಯಲು ಬರಬೇಕು.

h) 3 ವರ್ಷದ ತರಬೇತಿ ಅವಧಿಯಲ್ಲಿ ಸರ್ಕಾರಿ ಶುಶ್ರೂಷಾ ಶಾಲೆಗಳಿಗೆ ಆಯ್ಕೆ ಬಯಸುವ ವಿದ್ಯಾರ್ಥಿಗಳು ವಿವಾಹವಾಗುವಂತಿಲ್ಲ.

i) ಗರ್ಭಿಣಿ ಅಭ್ಯರ್ಥಿಗಳಿಗೆ ತರಬೇತಿಗೆ ಅವಕಾಶವಿರುವುದಿಲ್ಲ.

j) ವಿವಾಹಿತ ಮಹಿಳಾ ಅಭ್ಯರ್ಥಿಗಳು ಪತಿಯ ಆದಾಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸಕ್ಕದ್ದು.

5. ಅಂಗವಿಕಲ ಕೋಟಾದಡಿಯಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ದೇಹದ ಕೆಳಭಾಗದಲ್ಲಿ (ಕಾಲು) ಶೇ. 40 ರಿಂದ 50 ರೊಳಗೆ ಅಂಗವಿಕಲತೆ ಹೊಂದಿರುವವರು ಮಾತ್ರ ಶುಶ್ರೂಷ ತರಬೇತಿಗೆ ಅರ್ಹರಾಗಿರುತ್ತಾರೆ. ಈ ಕೋಟಾದಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ದೃಢೀಕರಣ ಪತ್ರವನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಮೂಲ ಪ್ರಮಾಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

6. **ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು, ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯಲ್ಲಿನ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳು ಶುಶ್ರೂಷ ತರಬೇತಿ ಆಯ್ಕೆಗೆ ಅರ್ಹರಿರುತ್ತಾರೆ.**

7. <u>ತರಬೇತಿಯ ಅವಧಿ:-</u> ಶುಶ್ರೂಷ ತರಬೇತಿ ಅವಧಿಯು ಮೂರು ವರ್ಷಗಳಾಗಿದ್ದು, ಸರ್ಕಾರಿ ನಿಯಮಗಳ ಪ್ರಕಾರ, ಸರ್ಕಾರಿ ಶುಶ್ರೂಷ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳು ಮಾತ್ರ ಶಿಷ್ಯವೇತನ ಪಡೆಯಲು ಅರ್ಹರಾಗಿರುತ್ತಾರೆ.

8. <u>ಹೈದ್ರಾಬಾದ್-ಕರ್ನಾಟಕ (ಕಲ್ಯಾಣ-ಕರ್ನಾಟಕ) ವಿಭಾಗೀಯ ಮೀಸಲಾತಿ:</u>

a) ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕು 184 ಆರ್.ಜಿ.ಯು 2014, ದಿನಾಂಕ: 30-05-2014ರ ಪ್ರಕಾರ ಹೈದ್ರಾಬಾದ್-ಕರ್ನಾಟಕ (ಕಲ್ಯಾಣ-ಕರ್ನಾಟಕ) ಪ್ರಾಂತ್ಯದ ಅಭ್ಯರ್ಥಿಗಳಿಗೆ ರಾಜ್ಯವ್ಯಾಪ್ತಿ ನರ್ಸಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 8%ರಷ್ಟು ಹಾಗೂ ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ನರ್ಸಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 70% ರಷ್ಟು ಸೀಟುಗಳನ್ನು ಹೈದ್ರಾಬಾದ್-ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಿಡಲಾಗುವುದು. (ಕಲಬುರಗಿ, ಬಳ್ಳಾರಿ, ರಾಯಚೂರು, ಕೊಪ್ಪಳ, ಬೀದರ್, ಯಾದಗಿರಿ ಮತ್ತು ವಿಜಯನಗರ)

b) ಹೈದ್ರಾಬಾದ್-ಕರ್ನಾಟಕ (ಕಲ್ಯಾಣ-ಕರ್ನಾಟಕ) ಮೀಸಲು ಕೋಟಾದಲ್ಲಿ ಆಯ್ಕೆ ಬಯಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ದೃಡೀಕರಣ ಪತ್ರವನ್ನು ಪಡೆದು, ಮೂಲ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

9. **ಇತರೆ ಮೀಸಲಾತಿ:-**

a) ಸರ್ಕಾರಿ ಶುಶ್ರೂಷ ಶಾಲೆಯಲ್ಲಿರುವ ಒಟ್ಟು ತರಬೇತಿ ಸ್ಥಾನಗಳಲ್ಲಿ ಶೇ. 5% ರಷ್ಟು ಸೀಟುಗಳನ್ನು ಪುರುಷ ಅಭ್ಯರ್ಥಿಗಳಿಗೆ ಆಯಾ ವರ್ಗಕ್ಕೆ ಅನುಸಾರವಾಗಿ ಮೀಸಲಿಡಲಾಗುವುದು.

b) ಮಾಜಿ ಸೈನಿಕರ ಮಕ್ಕಳಿಗೆ ಶೇ. 10% ರಷ್ಟು ಸೀಟುಗಳನ್ನು ಸರ್ಕಾರಿ ಶುಶ್ರೂಷ ಶಾಲೆಗಳಲ್ಲಿ ಮೀಸಲಿಡಸಲಾಗಿದ್ದು, ತಂದೆ ಮಾಜಿ ಸೈನಿಕರು ಎಂಬುದರ ಪ್ರಮಾಣ ಮೂಲ ಪತ್ರದ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

c) ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಎಂಪಿಎಸ್ 2010, ದಿನಾಂಕ: 04-02-2011ರಂತೆ ಸರ್ಕಾರಿ ಶುಶ್ರೂಷ ಶಾಲೆಗಳಲ್ಲಿರುವ ಒಟ್ಟು ಸೀಟುಗಳ ಪೈಕಿ ಶೇ. 2% ರಷ್ಟು ಸೀಟುಗಳನ್ನು ಆಂಗ್ಲೋ ಇಂಡಿಯನ್ ಸಮುದಾಯದ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗುವುದು. ಈ ಸ್ಥಾನದಲ್ಲಿ ಆಯ್ಕೆ ಬಯಸುವವರು ಕಂಡಿಕೆ (4) ರಲ್ಲಿನ ಷರತ್ತುಗಳನ್ನು ಪೂರೈಸಬೇಕು ಮತ್ತು ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಸೇರಿರುವ ಬಗ್ಗೆ ಮೂಲ ದೃಢೀಕರಣ ಪ್ರಮಾಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

d) ಮಹಿಳಾ ಅಭ್ಯರ್ಥಿಗಳಿಗೆ ಸರ್ಕಾರದ ಶುಶ್ರೂಷಾ ಶಾಲೆಗಳಲ್ಲಿ ಆಯಾ ವರ್ಗಕ್ಕೆ ತಕ್ಕಂತೆ ಎಲ್ಲಾ ಪ್ರವರ್ಗಕ್ಕೆ ಸರ್ಕಾರಿ ಆದೇಶಾನುಸಾರ ಸೀಟುಗಳನ್ನು ಮೀಸಲಿಡಲಾಗುವುದು.

e) ಶುಶ್ರೂಷ ತರಬೇತಿಗೆ ಆಯ್ಕೆಯಾಗಿ ತರಬೇತಿ ಪೂರ್ಣಗೊಳಿಸಿದ ಎಲ್ಲಾ ಅಭ್ಯರ್ಥಿಗಳಿಗೆ ಸರ್ಕಾರದಲ್ಲಿ ಸೇವೆ ಸಲ್ಲಿಸಲು ನೇಮಕ ಮಾಡಿಕೊಳ್ಳುವ ಖಾತರಿ ನೀಡುವುದಿಲ್ಲ. ಸರ್ಕಾರಿ ಶುಶ್ರೂಷ ಶಾಲೆಗಳಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ತರಬೇತಿಯ ಅವಧಿಯಲ್ಲಿ ಶಿಷ್ಯವೇತನವನ್ನು ಪಡೆಯುವುದರಿಂದ, ಇಬ್ಬರು ಖಾಯಂ ರಾಜ್ಯ ಸರ್ಕಾರಿ ನೌಕರರ ಜಾಮೀನಿನಿಂದ ಕೂಡಿದ ರೂ.100/-ಗಳ ಬಾಂಡ್ ಪತ್ರವನ್ನು ಪ್ರವೇಶ ಸಮಯದಲ್ಲಿ ಸಲ್ಲಿಸಬೇಕು.

f) ಸರ್ಕಾರಿ ಕೋಟಾದಡಿ ಖಾಸಗಿ ನರ್ಸಿಂಗ್ ಶಾಲೆಗಳಿಗೆ ಆಯ್ಕೆಯಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಅಭ್ಯರ್ಥಿಗಳು ನಿಯಮಾನುಸಾರ ಸಮಾಜ ಕಲ್ಯಾಣ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತ ಇಲಾಖೆಯಿಂದ ಶಿಷ್ಯವೇತನ ಪಡೆಯಬಹುದಾಗಿರುತ್ತದೆ.

g) ಸರ್ಕಾರಿ ಕೋಟಾದಲ್ಲಿ ಖಾಸಗಿ ಶುಶ್ರೂಷ ಶಾಲೆಗಳಿಗೆ ಆಯ್ಕೆಯಾಗುವ ವಿದ್ಯಾರ್ಥಿಗಳು ಊಟ, ವಸತಿ, ಸಮವಸ್ತ್ರ, ಪುಸ್ತಕ, ಪ್ರಾಯೋಗಿಕ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ಇತ್ಯಾದಿಗಳನ್ನು ವಿದ್ಯಾರ್ಥಿಗಳೇ ಭರಿಸತಕ್ಕದ್ದು.

h) ಅಭ್ಯರ್ಥಿಯು ಹಾಜರು ಪಡಿಸಿರುವ ಯಾವುದೇ ದಾಖಲೆಗಳು ಸುಳ್ಳು/ತಪ್ಪು/ತಿದ್ದಿರುವುದು/ನಕಲಿ ಎಂದು ಕಂಡುಬಂದ ಪಕ್ಷದಲ್ಲಿ ಅಂಥ ಅಭ್ಯರ್ಥಿಗೆ ಹಂಚಿಕೆ ಮಾಡಿರುವ ಸೀಟನ್ನು ಯಾವುದೇ ಸಮಯದಲ್ಲಿ ರದ್ದುಪಡಿಸಲಾಗುವುದು.

10. <u>ಸೇವಾನಿರತ ನೌಕರರ ಮೀಸಲು ಸೀಟುಗಳು:</u>

a) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ಶೇ.5% ರಷ್ಟು ಸೀಟುಗಳನ್ನು ಸರ್ಕಾರಿ ಶುಶ್ರೂಷ ಶಾಲೆಗಳಲ್ಲಿ ಮೀಸಲಿಡಲಾಗುವುದು. ಸೇವಾನಿರತ ಅಭ್ಯರ್ಥಿಗಳು ಈ ಕೆಳಕಂಡ ವಿದ್ಯಾರ್ಹತೆ ಹೊಂದಿರಬೇಕು.

b) 10+2 with 40% marks from any recognized board.

c) Registered ANM Certificate.

d) Candidates are eligible from State Open School recognized by State Government and National Institute of Open School (NIOS) recognized by Central Government.

11. ಸೇವಾನಿರತ (ಎ.ಎನ್.ಎಮ್) ನೌಕರರು ಹಿಂದಿನ ಹುದ್ದೆಗೆ ಬಾಂಡ್ ಅವಧಿ ಮುಗಿದು 5 ವರ್ಷಕ್ಕೆ ಕಡಿಮೆಯಿಲ್ಲದೇ ಸರ್ಕಾರಿ ಸೇವೆ ಸಲ್ಲಿಸಿರಬೇಕು ಮತ್ತು ಖಾಯಂಪೂರ್ವಾ ಸೇವಾವಧಿ ಘೋಷಣೆಯಾಗಿರಬೇಕು. ಹಾಗೂ ಇಲಾಖಾ ವಿಚಾರಣೆ ಬಾಕಿ ಇಲ್ಲದಂತಹ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿ ಕಂಡಿಕೆ (4) ರಲ್ಲಿನ ದಾಖಲಾತಿಗಳನ್ನು ಹಾಗೂ ನೇಮಕಾತಿ ಆದೇಶದ ಪ್ರತಿ ಮತ್ತು ಖಾಯಂ ಪೂರ್ವ ಸೇವಾವಧಿ ಘೋಷಣೆ ಪ್ರತಿ, ಉನ್ನತ ವ್ಯಾಸಂಗಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 2026–27 ನೇ ಸಾಲಿಗಾಗಿ ನೇಮಕಾತಿ

ಪ್ರಾಧಿಕಾರದಿಂದ ನಿರಪೇಕ್ಷಣಾ ಪತ್ರ (NOC), ಇಲಾಖಾ ವಿಚಾರಣೆ ಬಾಕಿ ಇಲ್ಲವೆಂದು ನೇಮಕಾತಿ ಪ್ರಾಧಿಕಾರದಿಂದ ದೃಢೀಕರಣ ಪತ್ರ ಪಡೆದು, ಅದರ ಪ್ರತಿಯನ್ನು ನಿಗದಿಪಡಿಸಿರುವ ಎಲ್ಲಾ ದಾಖಲಾತಿಗಳನ್ನು Gazetted ಅಧಿಕಾರಿಗಳಿಂದ ದೃಡೀಕರಿಸಿದ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ, ಪೋಸ್ಟ್ / ಕೋರಿಯರ್ ಮೂಲಕ ತಮ್ಮ ನೇಮಕಾತಿ ಪ್ರಾಧಿಕಾರದ ಮುಖಾಂತರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ, ಮೊದಲನೇ ಮಹಡಿ, ಲೈಬ್ರರಿ ಬ್ಲಾಕ್, ಬಿ.ಎಂ.ಸಿ.ಆರ್.ಐ. ಆವರಣ, ಬೆಂಗಳೂರು ಇವರಿಗೆ ದಿನಾಂಕ: 30-05-2026 ರೊಳಗೆ ಸಲ್ಲಿಸತಕ್ಕದ್ದು.

12. **ಹೈದ್ರಾಬಾದ್-ಕರ್ನಾಟಕ (ಕಲ್ಯಾಣ-ಕರ್ನಾಟಕ) ವಿಭಾಗೀಯ ಮೀಸಲಾತಿ:**

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕು 184 ಆರ್.ಜಿ.ಯು 2014, ದಿನಾಂಕ: 30-05-2014ರ ಪ್ರಕಾರ ಹೈದ್ರಾಬಾದ್-ಕರ್ನಾಟಕ (ಕಲ್ಯಾಣ-ಕರ್ನಾಟಕ) ಪ್ರಾಂತ್ಯದ ಅಭ್ಯರ್ಥಿಗಳಿಗೆ ರಾಜ್ಯವ್ಯಾಪ್ತಿ ನರ್ಸಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 8%ರಷ್ಟು ಹಾಗೂ ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ನರ್ಸಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 70% ರಷ್ಟು ಸೀಟುಗಳನ್ನು ಹೈದ್ರಾಬಾದ್-ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಿಡಲಾಗುವುದು. (ಕಲಬುರಗಿ, ಬಳ್ಳಾರಿ, ರಾಯಚೂರು, ಕೊಪ್ಪಳ, ಬೀದರ್, ಯಾದಗಿರಿ ಮತ್ತು ವಿಜಯನಗರ)

13. ಹೈದ್ರಾಬಾದ್-ಕರ್ನಾಟಕ (ಕಲ್ಯಾಣ-ಕರ್ನಾಟಕ) ಮೀಸಲು ಕೋಟಾದಲ್ಲಿ ಆಯ್ಕೆ ಬಯಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ದೃಡೀಕರಣ ಪತ್ರವನ್ನು ಪಡೆದು, ಮೂಲ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

14. **2026-27 ನೇ ಸಾಲಿಗಾಗಿ ನೇಮಕಾತಿ ಪ್ರಾಧಿಕಾರದಿಂದ ನಿರಪೇಕ್ಷಣಾ ಪತ್ರ (NOC) ಪಡೆದ ನಂತರವೇ ನಿಗಧಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕು. ಮತ್ತು ಪೋಸ್ಟ್/ಕೋರಿಯರ್ ಮೂಲಕ ಮೂಲ ನಿರಪೇಕ್ಷಣಾ ಪತ್ರವನ್ನು (NOC) ಕಳುಹಿಸಿಕೊಡಬೇಕು. ಒಂದು ವೇಳೆ ನಿರಪೇಕ್ಷಣಾ ಪತ್ರ (NOC) ಪಡೆಯದೇ ಅರ್ಜಿ ಸಲ್ಲಿಸಿದ್ದಲ್ಲಿ ತಿರಸ್ಕರಿಸಲಾಗುವುದು.**

ಕಾರ್ಯದರ್ಶಿಗಳು 28/4/26
ಕ.ರಾ.ಶು.ಪ.ಮಂ. ಬೆಂಗಳೂರು.
28/04/2026

ಪ್ರತಿಯನ್ನು ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿ.ಎಂ.ಸಿ.ಆರ್.ಐ ಆವರಣ ಹಳೆ ಕಟ್ಟಡ, ಕೆ.ಆರ್.ರಸ್ತೆ, ಬೆಂಗಳೂರು ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.